ಕೊಡ್ಲೇನು?'

'ಇಲ್ಲ ಅಂತಲ್ಲ... ನನ್ನ ಕಣ್ಣಿನ ಆಪರೇಷನ್ನಿಗಂತ ತೆಗೆದಿಟ್ಟಿದ್ದನ್ನೇ...'

'ಹಂಗಾರ ಮೊದಲು ಈ ಹುದಲಿನಿಂದ ಪಾರಾಗುವ ಹಾದಿ ನೋಡ್ರಿ. ಅಂವ ಮೊದಲು ಮನಿಗೆ ಬರ್ಲಿ. ಕಣ್ಣಿನ ಆಪರೇಷನ್ನು ಆಮ್ಯಾಲ. ನನಗ ಛಲೋ ಡಾಕ್ಟರು ಗೊತ್ತಿದಾರ. ನಾ ಕರಕೊಂಡು ಹೋಗತೇನಿ ಚಿಂತಿ ಬಿಡ್ರಿ...'

ಶರಣಪ್ಪ ದಂಗಾದ. ಈ ದತ್ತು ತನ್ನನ್ನು ಹಳ್ಳದೊಳಗ ದಬ್ಬಲಿಕ್ಕೆ ಹತ್ಯಾನೋ, ಹಳ್ಳದಿಂದ ಮ್ಯಾಲಕ್ಕ ಎತ್ತಲಿಕ್ಕೆ ಹತ್ಯಾನೋ ಹೊಳೆಯಲಿಲ್ಲ.

'ಹೀಂಗ ಬಾಯಿ ಮುಚ್ಚಿ ಕೂತ್ರೆ ಕೆಲಸ ಆಗೂದಿಲ್ಲ. ವಿಷಯ ಸೂಕ್ಷ್ಮ ಅದೆ. ಈಗ ಉದಾಸೀನ ಮಾಡಿದ್ರಿ ಅಂದ್ರ ಆಮ್ಯಾಲ ಪೊಲೀಸರು ಪದೇ ಪದೇ ಮನೆಗೆ ಬರೋದು ವಿಚಾರಣೆ ಮಾಡೋದು, ಬಾಜೂದವರನ್ನ ಕೇಳೋದು, ಕೋರ್ಟು, ಜೈಲು, ಪೇಪರದೊಳಗ, ಟೀವಿದೊಳಗ ಯಾವ್ಯಾವ ರೀತಿ ಮಾನಹಾನಿ ಆಗ್ತದ ಹೇಳ್ಳಿಕ್ಕೆ ಬರೋದಿಲ್ಲ. ಒಂದು ವ್ಯಾಳ್ಯಾ ಇದೇನಾದ್ರೂ ರೇಪ್ ಪ್ರಸಂಗ ಅಂತ ಕೂಗೆದ್ದು ಬಿಡ್ತು ಅಂತಂದ್ರ ನಿಮ್ಮ ಹುಡುಗನ ಕರಿಯರ್ರೇ ಹಾಳು. ಆದ್ದರಿಂದ ನಾ ಹೇಳೋದು ಕೇಳ್ರಿ. ಕೇಸು ಇನ್ನು ನಮ್ಮ ಕೈಯೊಳಗs ಅದೆ. ಅದು ಮೀರಿ ಹೋಗೂದ್ರೊಳಗs ಸರಿ ಮಾಡಕೋಬೇಕು. ಅವರು ಮೂವತ್ತು ಸಾವಿರ ಕೇಳಿದ್ರ ಮೂವತ್ತು, ನಲವತ್ತು ಕೇಳಿದ್ರ ನಲವತ್ತು ಮೊದಲು ಕೊಟ್ಟು ಮುಕ್ತರಾಗಿ ಬಿಡೋಣು.'

'.....'

'ಆವಾಗ ತೊಗೊಳ್ಳೂ ಮುಂದ ಮುಲಾಜಿಲ್ಲದೆ ಎರಡೂ ಕೈಯಿಂದ ಬಳಕೊಂಡ್ರಿ. ಈಗ ಕೊಡೂಮುಂದ ಯಾಕ ಜಿಬವತನ?'

'.....'

'ನಾ ಎಲ್ಲ ವ್ಯವಹಾರ ಮುಗಿಸತೇನಿ ನಾ ಹೇಳಿದ್ದಕ್ಕೆಲ್ಲ ನೀವು ತಲಿ ಆಡಸ್ರಿ ಸಾಕು...'

'.....'

'ನನಗ್ಯಾಕ ಇಂಟರೆಷ್ಟು ಅಂತ ಕೇಳತೀರೇನು? ನಿಮ್ಮ ಮೂರ್ಖ ಮಗ ನಮ್ಮ ಆಫೀಸಿನ ಹೆಸರು ಹೇಳಿಬಿಟ್ಟಾನ. ನನಗೆ ಡಿಗ್ನಿಟಿ ಪ್ರಶ್ನೆ. ಸುಕಾ ಸುಮ್ನೆ ಅಪವಾದ ನಾಯಕ ಹೊರ್ಲಿ?'

ಶರಣಪ್ಪನಿಗೆ ಮತ್ತೆ ಹುದಲಿನಲ್ಲಿ ಸಿಕ್ಕ ಅನುಭವ.

## ರಾಮಚಂದ್ರ ಭಾವೆ

ಶಿವಮೊಗ್ಗ ಜಿಲ್ಲೆಯ ಸೊರಬ ರಾಮಚಂದ್ರ ಭಾವೆ ಅವರ ಊರು. ಅಂಚೆ ಇಲಾಖೆಯಲ್ಲಿ ಗದಗದಲ್ಲಿ 35 ವರ್ಷ ಸೇವೆ ಸಲ್ಲಿಸಿದ್ದಾರೆ. ಇಲ್ಲಿಯವರೆಗೆ ಅವರ 20 ಕಾದಂಬರಿಗಳು, ಐದು ಕಥಾಸಂಗ್ರಹಗಳು ಪ್ರಕಟವಾಗಿವೆ. 'ಅಂಧಪರ್ವ' ಕಾದಂಬರಿ 'ಸುಧಾ' ವಾರಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿತ್ತು. ಪ್ರಸ್ತುತ ಮಹಾರಾಷ್ಟ್ರದ ರತ್ನಾಗಿರಿಯಲ್ಲಿ ವಾಸವಾಗಿದ್ದಾರೆ. ಭಾವೆ, ನಾಟಕಗಳನ್ನೂ ಬರೆದಿದ್ದಾರೆ. ಸುಮಾರು 250 ಕತೆಗಳು ಪತ್ರಿಕೆಗಳಲ್ಲಿ ಪ್ರಕಟವಾಗಿವೆ. 'ಮಯೂರ' ಮಾಸಪತ್ರಿಕೆಯೊಂದರಲ್ಲೇ ಅವರ 25ಕ್ಕೂ ಹೆಚ್ಚು ಕತೆಗಳು ಅಚ್ಚಾಗಿವೆ.